**All India Radio: Bangalore**
**National Bulletin In Kannada**
**16.01.2025 13.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**16.01.2025 13.10 p.m.**
**<><><><>**

ಮುಖ್ಯಾಂಶಗಳು

1. ಇಸ್ರೋದಿಂದ ಸ್ಪೇಡೆಕ್ಸ್ ಮಿಷನ್ ಅಡಿಯಲ್ಲಿ ಉಪಗ್ರಹಗಳ ಜೋಡನಾ ಕಾರ್ಯ ಯಶಸ್ವಿ ; ವಿಜ್ಞಾನಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ
2. ಸಿಂಗಾಪುರ್ ಅಧ್ಯಕ್ಷ ಧರ್ಮನ್ ಷಣ್ಮುಗರತ್ನಂ ಅವರಿಗೆ ರಾಷ್ಟ್ರಪತಿ ಭವನದಲ್ಲಿ ಸಾಂಪ್ರದಾಯಿಕ ಸ್ವಾಗತ
3. ಸ್ಟಾರ್ಟ್‌ಅಪ್ ಇಂಡಿಯಾ ಮಹತ್ವಾಕಾಂಕ್ಷಿ ಯೋಜನೆಗೆ ೯ ವರ್ಷ : ನವೋದ್ಯಮಗಳ ಪ್ರೋತ್ಸಾಹಕ್ಕೆ ಕೇಂದ್ರದಿಂದ ಅಗತ್ಯ ಕ್ರಮ
4. ಗಾಜಾಪಟ್ಟಿಯಲ್ಲಿ ಕದನ ವಿರಾಮ : ಇಸ್ರೇಲ್-ಹಮಾಸ್ ಒಪ್ಪಿಗೆ : ಸ್ವಾಗತಾರ್ಹ ಬೆಳವಣಿಗೆ - ಭಾರತ ಪ್ರತಿಕ್ರಿಯೆ

<><><><>

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ - ಇಸ್ರೋ ತನ್ನ ಸ್ಪೇಡೆಕ್ಸ್ ಮಿಷನ್ ಅಡಿಯಲ್ಲಿ ೨ ಉಪಗ್ರಹಗಳ ಜೋಡನಾ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಇಸ್ರೋದ ಈ ಸಾಧನೆಯನ್ನು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ. ಉಪಗ್ರಹಗಳ ಸ್ಪೇಸ್ ಡಾಕಿಂಗ್ ಪ್ರದರ್ಶನವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಇಸ್ರೋದ ವಿಜ್ಞಾನಿಗಳು ಹಾಗೂ ಬಾಹ್ಯಾಕಾಶ ಸಂಶೋಧನೆಯಲ್ಲಿ ತೊಡಗಿರುವ ಎಲ್ಲರನ್ನು ಪ್ರಧಾನಿ ಅಭಿನಂದಿಸಿದ್ದಾರೆ. ಈ ಕುರಿತು, ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ, ಮುಂಬರುವ ವರ್ಷಗಳಲ್ಲಿ ದೇಶದ ಮಹತ್ವಾಕಾಂಕ್ಷಿ ಬಾಹ್ಯಾಕಾಶ ಮಿಷನ್‌ಗಳನ್ನು ಕೈಗೆತ್ತಿಕೊಳ್ಳಲು ಇದೊಂದು ಮಹತ್ವದ ಮೈಲಿಗಲ್ಲಾಗಿದೆ ಎಂದು ತಿಳಿಸಿದ್ದಾರೆ. ಈ ನಡುವೆ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಜಿತೇಂದ್ರ ಸಿಂಗ್ ಈ ಸಾಧನೆ ಅಮೋಘವಾಗಿದ್ದು, ದೇಶೀಯ ಭಾರತೀಯ ಡಾಕಿಂಗ್ ವ್ಯವಸ್ಥೆಯಲ್ಲಿ ದಾಖಲಿಸುವಂತಾಗಿದೆ ಎಂದು ಪ್ರತಿಕ್ರಿಯಿಸಿದ್ದಾರೆ. ಭಾರತೀಯ ಅಂತರಿಕ್ಷ ಸ್ಟೇಷನ್, ಚಂದ್ರಯಾನ-೪ ಮತ್ತು ಗಗನಯಾನದಂತಹ ಭವಿಷ್ಯದ ಮಿಷನ್ ಯೋಜನೆಗಳನ್ನು ಸುಸೂತ್ರವಾಗಿ ಕೈಗೆತ್ತಿಕೊಳ್ಳಲು ಸಹಕಾರಿಯಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

<><><><>

ಭಾರತ ಪ್ರವಾಸದಲ್ಲಿರುವ ಸಿಂಗಾಪುರ್ ಅಧ್ಯಕ್ಷ ಧರ್ಮನ್ ಷಣ್ಮುಗರತ್ನಂ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ರಾಷ್ಟ್ರಪತಿ ಭವನದಲ್ಲಿಂದು ಸಾಂಪ್ರದಾಯಿಕ ಸ್ವಾಗತ ಕೋರಿದರು. ಈ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಉಪಸ್ಥಿತರಿದ್ದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಿಂಗಾಪುರ್ ಅಧ್ಯಕ್ಷರು ಉಭಯ ದೇಶಗಳ ನಡುವೆ ಸುಸ್ಥಿರತೆ ಮತ್ತು ಡಿಜಿಟಲ್ ಬಾಹ್ಯಾಕಾಶ ತಂತ್ರಜ್ಞಾನ ವಲಯದಲ್ಲಿ ಹೊಸ ಉಪಕ್ರಮಗಳನ್ನು

ಕಂಡುಕೊಳ್ಳುವ ಬಗ್ಗೆ ಪ್ರಯತ್ನಗಳು ನಡೆದಿವೆ ಎಂದರು. ಗುಜರಾತ್‌ನ ಗಿಫ್ಟ್ ಸಿಟಿ ಹಾಗೂ ಸಿಂಗಾಪುರ್‌ನಲ್ಲಿರುವ ಹಣಕಾಸು ಸಂಸ್ಥೆಗಳ ನಡುವೆ ಡಾಟಾ ಕಾರಿಡಾರ್ ವ್ಯವಸ್ಥೆ ರೂಪಿಸುವ ಸಾಧ್ಯತೆಗಳ ಕುರಿತು ಅವರು ಪ್ರಸ್ತಾಪಿಸಿದರು. ಉಭಯ ದೇಶಗಳ ನಡುವಿನ ಸಮಗ್ರ ವ್ಯೂಹಾತ್ಮಕ ಪಾಲುದಾರಿಕೆಯನ್ನು ಮತ್ತಷ್ಟು ಚುರುಕುಗೊಳಿಸುವುದು ಹಾಗೂ ಸೆಮಿಕಂಡೆಕ್ಟರ್‌ಗಳು ಹೊಸಪೀಳಿಗೆ ಹಾಗೂ ನೆಟ್ ಜಿರೋ ಕೈಗಾರಿಕಾ ಉದ್ಯಾನಗಳ ನಿರ್ಮಾಣ ವಿಚಾರದಲ್ಲೂ ಪರಸ್ಪರ ಸಹಕಾರಕ್ಕೆ ಅಗತ್ಯವಿರುವ ಹೊಸ ಉಪಕ್ರಮಗಳನ್ನು ಜಾರಿಗೊಳಿಸುವುದು ಅತ್ಯಗತ್ಯ ಎಂದರು. ಉಭಯ ದೇಶಗಳ ನಡುವೆ ವ್ಯಾಪಾರ, ರಕ್ಷಣಾ ಸಹಕಾರ ಮತ್ತು ಕೌಶಲ್ಯಾಭಿವೃದ್ಧಿ ವಿಚಾರಗಳಿಂದ ಉತ್ತಮ ಬಾಂಧವ್ಯ ಮುಂದುವರೆದಿದೆ. ೧೯೬೫ರಲ್ಲಿ ಸಿಂಗಾಪುರ್‌ನ ಸ್ವಾತಂತ್ರ್ಯಕ್ಕೆ ಮನ್ನಣೆ ನೀಡಿದ ಮೊದಲ ಕೆಲವೇ ರಾಷ್ಟ್ರಗಳ ಪೈಕಿ ಭಾರತವು ಒಂದಾಗಿದೆ. ಅಲ್ಲಿಂದೀಚೆಗೆ ಉಭಯ ದೇಶಗಳ ನಡುವೆ ಸಂಬಂಧ ವೃದ್ಧಿಯಾಗುತ್ತಾ ಬಂದಿದೆ ಎಂದರು.

## ಧ್ವನಿ : ಧರ್ಮನ್ ಷಣ್ಮುಗರತ್ನಂ (೩೨ ಸೆಕೆಂಡ್ಸ್)

<><><><>

ಈ ನಡುವೆ ಪ್ರಧಾನಿ ನರೇಂದ್ರ ಮೋದಿ ದೆಹಲಿಯಲ್ಲಿಂದು ಸಿಂಗಾಪುರ್ ಅಧ್ಯಕ್ಷ ಥರ್ಮನ್ ಷಣ್ಮುಗರತ್ನಂ ಅವರೊಂದಿಗೆ ಮಹತ್ವದ ಮಾತುಕತೆ ನಡೆಸಲಿದ್ದಾರೆ. ಸಿಂಗಾಪುರದ ಅಧ್ಯಕ್ಷ ಷಣ್ಮುಗರತ್ನಂ ಅವರು, ಭಾರತಕ್ಕೆ ೫ ದಿನಗಳ ಪ್ರವಾಸ ಕೈಗೊಂಡಿದ್ದಾರೆ. ಅವರೊಂದಿಗೆ ಸಚಿವರು, ಸಂಸದರು ಮತ್ತು ಅಧಿಕಾರಿಗಳನ್ನೊಳಗೊಂಡ ಉನ್ನತಮಟ್ಟದ ನಿಯೋಗ ದೆಹಲಿಗೆ ಆಗಮಿಸಿದೆ. ಸಿಂಗಾಪುರ್ ಅಧ್ಯಕ್ಷರಾದ ನಂತರ ಭಾರತಕ್ಕೆ ಅವರು ಭೇಟಿ ನೀಡುತ್ತಿರುವುದು ಇದೇ ಮೊದಲ ಬಾರಿಯಾಗಿದೆ. ಸಿಂಗಾಪುರ್ ಅಧ್ಯಕ್ಷರು ನಾಳೆ ಮತ್ತು ನಾಡಿದ್ದು, ಒಡಿಶಾಗೆ ಭೇಟಿ ನೀಡಲಿದ್ದಾರೆ.

<><><><>

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಸ್ಟಾರ್ಟ್‌ಅಪ್ ಇಂಡಿಯಾ ಉಪಕ್ರಮ ಜಾರಿಗೆ ಬಂದು ಇಂದಿಗೆ ೯ ವರ್ಷಗಳನ್ನು ಪೂರೈಸಿದೆ. ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ, ದೇಶದಲ್ಲಿ ನವೋದ್ಯಮಗಳ ಸಂಸ್ಕೃತಿ ಪ್ರೋತ್ಸಾಹಿಸಲು ಎಲ್ಲ ರೀತಿಯ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ ಎಂದು ಹೇಳಿದ್ದಾರೆ. ಕಳೆದ ೯ ವರ್ಷಗಳಲ್ಲಿ ಅಸಂಖ್ಯಾತ ಯುವಜನತೆ ನವೋದ್ಯಮಗಳ ಸ್ಥಾಪನೆ ವಿಚಾರದಲ್ಲಿ ತಮ್ಮಲ್ಲಿರುವ ನಾವೀನ್ಯತಾ ಅಲೋಚನೆಗಳನ್ನು ಕಾರ್ಯರೂಪಕ್ಕೆ ಯಶಸ್ವಿಯಾಗಿ ತಂದಿದ್ದಾರೆ ಎಂದರು.

## ಧ್ವನಿ : ಪ್ರಧಾನಿ ನರೇಂದ್ರ ಮೋದಿ (೧೩ ಸೆಕೆಂಡ್ಸ್)

ಸುಲಭ ವ್ಯಾಪಾರ ವಹಿವಾಟು ನಡೆಸಲು ಅನಕೂಲವಾಗುವಂತೆ ಸರ್ಕಾರ  ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದು, ಪ್ರತಿಯೊಂದು ಹಂತದಲ್ಲೂ ನವೋದ್ಯಮಗಳಿಗೆ ಅಗತ್ಯ ಸಂಪನ್ಮೂಲ ಮತ್ತು ಬೆಂಬಲ ನೀಡಲಾಗುತ್ತಿದೆ ಎಂದು ಹೇಳಿದ್ದಾರೆ. ದೇಶದಲ್ಲಿ ಅನ್ವೇಷಣೆ ಮತ್ತು ಉದ್ಯಮ ಶೀಲತೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಈ ಯೋಜನೆಯನ್ನು ಜಾರಿಗೆ ತರಲಾಗಿತ್ತು. ದೇಶದಲ್ಲಿ ನವೋದ್ಯಮ, ಸಂಸ್ಕೃತಿ ಮತ್ತು ಪರಿಸರ ಸ್ನೇಹಿ ಉದ್ಯಮಗಳನ್ನು

ಸ್ಥಾಪಿಸುವ ಮೂಲಕ ಯುವ ಉದ್ಯಮಿಗಳಿಗೆ ಪ್ರೋತ್ಸಾಹ ನೀಡುವುದು ಈ ಯುವ ಉಪಕ್ರಮದ ಪ್ರಮುಖ ಉದ್ದೇಶವಾಗಿದೆ. ಉದ್ಯೋಗ ಬಯಸುವ ಯುವ ಸಮುದಾಯಕ್ಕೆ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಜೊತೆಗೆ ಉದ್ಯೋಗಧಾತರನ್ನಾಗಿ ಪರಿವರ್ತಿಸುವುದು ಸ್ಟಾರ್ಟ್‌ಅಪ್ ಇಂಡಿಯಾದ ಪ್ರಮುಖ ಉದ್ದೇಶವಾಗಿದ್ದು, ಈ ಯೋಜನೆಯಡಿ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ.

<><><>

ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭಮೇಳ ದೇಶದ ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆ ಜೊತೆಗೆ ಪರಿಸರ ಸಂರಕ್ಷಣೆಗೂ ಪ್ರಬಲ ಆಂದೋಲನವಾಗಿ ರೂಪುಗೊಂಡಿದೆ. ಇದೇ ತಿಂಗಳ ೩೧ರಂದು ಪ್ರಯಾಗ್‌ರಾಜ್ ನಗರದಲ್ಲಿ ಹಸಿರು ಮಹಾಕುಂಭಮೇಳವನ್ನು ಆಯೋಜಿಸಲಾಗುವುದು. ಗ್ರೀನ್ ಮಹಾಕುಂಭ ಅಥವಾ ಹಸಿರು ಮಹಾಕುಂಭಮೇಳದಲ್ಲಿ ಒಂದು ಸಾವಿರಕ್ಕೂ ಅಧಿಕ ಪರಿಸರ ಹಾಗೂ ಜಲಸಂರಕ್ಷಣಾ ಕಾರ್ಯಕರ್ತರು ಭಾಗಿಯಾಗಲಿದ್ದಾರೆ. ಇದರ ಅಂಗವಾಗಿ ಪರಿಸರ, ಜಲ, ಸಂರಕ್ಷಣೆ, ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಜಾಗೃತಿ ಮೂಡಿಸಲು ರಾಷ್ಟ್ರಮಟ್ಟದ ಚರ್ಚಾಕೂಟಗಳು ನಡೆಯಲಿವೆ.

<><><>

ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ೨೦೨೫ರ ಮಹಾಕುಂಭಮೇಳದಲ್ಲಿ ಆರೋಗ್ಯ ರಕ್ಷಣೆಗೆ ವಿಶೇಷ ಒತ್ತು ನೀಡಲಾಗಿದೆ. ಈ ಮೇಳದಲ್ಲಿ ಏರ್ಪಡಿಸಿರುವ ನೇತ್ರ ಚಿಕಿತ್ಸಾ ಶಿಬಿರ ವಿಶೇಷ ಗಮನ ಸೆಳೆಯುತ್ತಿದೆ. ಶಿಬಿರದಲ್ಲಿ ೫ ಲಕ್ಷ ಓಪಿಡಿಗಳನ್ನು ತೆರೆಯಲಾಗಿದ್ದು, ಕುಂಭಮೇಳದಲ್ಲಿ ಪಾಲ್ಗೊಂಡಿರುವವರ ದೃಷ್ಟಿದೋಷ ನಿವಾರಣೆಗೆ ಅಗತ್ಯವಿರುವ ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರತಿನಿತ್ಯ ೧೦ ಸಾವಿರ ತಜ್ಞವೈದ್ಯರು ಕುಂಭಮೇಳದಲ್ಲಿ ಪಾಲ್ಗೊಂಡಿರುವ ಭಕ್ತರಿಗೆ ದೃಷ್ಟಿದೋಷ ನಿವಾರಣೆಗೆ ಸಲಹೆ ಸೂಚನೆಗಳನ್ನು ನೀಡುತ್ತಿದ್ದಾರೆ. ನೇತ್ರ ಚಿಕಿತ್ಸಾ ಶಿಬಿರದ ಸಂಘಟನಾ ಸಮಿತಿಯ ಸದಸ್ಯ ಡಾ. ರಂಜನ್ ಬಾಜ್‌ಪೈ ಪ್ರತಿನಿತ್ಯ ದೃಷ್ಟಿದೋಷ ಇರುವ ಭಕ್ತರಿಗೆ ಸೂಕ್ತ ಸಲಹೆ ಹಾಗೂ ಚಿಕಿತ್ಸೆ ನೀಡಲು ೪೦ ತಜ್ಞ ವೈದ್ಯರ ತಂಡ ಕೆಲಸ ಮಾಡುತ್ತಿದೆ. ೧೦೦ ಮಂದಿ ನೇತ್ರ ತಪಾಸಣೆ ಮಾಡುವವರ ತಂಡ ಇದ್ದು, ಭಕ್ತರಿಗೆ ಸೂಕ್ತ ಚಿಕಿತ್ಸೆ ಮತ್ತಿತರ ಸೌಲಭ್ಯಗಳನ್ನು ಕಲ್ಪಿಸಲು ಮುಂದಾಗಿದೆ ಎಂದು ಆಕಾಶವಾಣಿಗೆ ತಿಳಿಸಿದ್ದಾರೆ.

## ಧ್ವನಿ : ಡಾ. ರಂಜನ್ ಬಾಜ್‌ಪೈ (೧೬ ಸೆಕೆಂಡ್ಸ್)

<><><>

ಕತಾರ್‌ನ ಪ್ರಧಾನಮಂತ್ರಿ ಮೊಹಮ್ಮದ್ ಬಿನ್ ಅಬ್ದುಲ್ ರೆಹಮಾನ್ ಅಲ್ ಥಾನಿ ಅವರು ನಡೆಸಿದ ಸಂಧಾನದ ಫಲವಾಗಿ ಗಾಜಾಪಟ್ಟಿಯಲ್ಲಿ ಕದನ ವಿರಾಮ ಘೋಷಿಸಲು ಇಸ್ರೇಲ್ ಮತ್ತು ಹಮಾಸ್ ಸಮ್ಮತಿಸಿವೆ. ಕದನ ವಿರಾಮ ಪ್ರಕ್ರಿಯೆ ಭಾನುವಾರದಿಂದ ಆರಂಭವಾಗಲಿದ್ದು, ೪೨ ದಿನಗಳಲ್ಲಿ ಅಂತಿಮಗೊಳ್ಳಲಿದೆ. ಕತಾರ್ ಪ್ರಧಾನಿ ಅಲ್‌ಥಾನಿ ಅವರು, ಕದನ ವಿರಾಮ ಸಂಬಂಧ ಆಗಿರುವ ಒಪ್ಪಂದ ಕುರಿತ ವಿಷಯವನ್ನು ದೋಹಾದಲ್ಲಿ ನಿನ್ನೆ ಪ್ರಕಟಿಸಿದರು. ಕದನ ವಿರಾಮದಿಂದ ಬಂಧಿತ ಇಸ್ರೇಲಿಯನ್ನರ ಬಿಡುಗಡೆಗೆ ದಾರಿ ಸುಗಮವಾಗಲಿದೆ ಮತ್ತು ಗಾಜಾ ಪಟ್ಟಿಯಲ್ಲಿ ಮಾನವೀಯ ಚಟುವಟಿಕೆಗಳು ಆರಂಭವಾಗಲಿಕ್ಕೆ ಸಹಕಾರಿಯಾಗಲಿದೆ. ಕದನ ವಿರಾಮ ಒಪ್ಪಂದಕ್ಕೆ ಅನುಮೋದನೆ

ನೀಡಲು ಕತಾರ್‌ನ ಭದ್ರತೆ ಕುರಿತ ಸಚಿವ ಸಂಪುಟ ಸಭೆ ಇಂದು ನಡೆಯಲಿದೆ. ಈ ನಡುವೆ ಕದನ ವಿರಾಮ ಘೋಷಣೆಯನ್ನು ಭಾರತ ಸ್ವಾಗತಿಸಿದೆ. ಈ ಕುರಿತು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿಕೆಯೊಂದನ್ನು ಬಿಡುಗಡೆ ಮಾಡಿ ಈ ಒಪ್ಪಂದದಿಂದ ಗಾಜಾದ ಜನರ ಸುರಕ್ಷತೆ ಹಾಗೂ ಅವರಿಗೆ ಮಾನವೀಯ ಸಹಾಯ ದೊರೆಯಲು ಸಹಕಾರಿಯಾಗಲಿದೆ ಎಂದು ಹೇಳಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಆಕಾಶವಾಣಿಯ ಜನಪ್ರಿಯ ಮಾಸಿಕ ಕಾರ್ಯಕ್ರಮ ಮನ್ ಕಿ ಬಾತ್ ಮೂಲಕ ಈ ತಿಂಗಳ ೧೯ರ ಭಾನುವಾರದಂದು ಬೆಳಗ್ಗೆ ೧೧ ಗಂಟೆಗೆ ದೇಶ ವಿದೇಶಗಳಲ್ಲಿರುವ ಭಾರತೀಯರೊಂದಿಗೆ ತಮ್ಮ ಚಿಂತನೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮನ್ ಕಿ ಬಾತ್ ಕಾರ್ಯಕ್ರಮದ ೧೧೮ನೇ ಆವೃತ್ತಿಯಾಗಿದೆ. ಸಾರ್ವಜನಿಕರು ತಮ್ಮ ಸಲಹೆ, ಸೂಚನೆಗಳನ್ನು ಉಚಿತ ದೂರವಾಣಿ ೧೮೦೦-೧೧-೭೮೦೦ ಗೆ ಕರೆ ಮಾಡಿ ತಿಳಿಸಬಹುದಾಗಿದೆ. ಇದಲ್ಲದೇ ಸಾರ್ವಜನಿಕರು ನರೇಂದ್ರ ಮೋದಿ ಆಪ್ ಅಥವಾ ಮೈ ಗೌವ್ ಓಪನ್ ಫೋರಂ ಮೂಲಕ ಆನ್‌ಲೈನ್‌ನಲ್ಲಿ ಅಭಿಪ್ರಾಯಗಳನ್ನು ಹಂಚಿಕೊಳ್ಳಬಹುದಾಗಿದೆ.

<><><>

ನವದೆಹಲಿಯ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಿನ್ನೆ ನಡೆದ ಖೋ ಖೋ ವಿಶ್ವಕಪ್ ೨೦೨೫ರ ಪಂದ್ಯದ ಚೊಚ್ಚಲ ಆವೃತ್ತಿಯಲ್ಲಿ ಅಮೋಘ ಪ್ರದರ್ಶನ ಮುಂದುವರೆಸಿರುವ ಆತಿಥೇಯ ಭಾರತದ ಪುರುಷರು ಹಾಗೂ ಮಹಿಳಾ ತಂಡಗಳು ಕ್ವಾರ್ಟರ್ ಫೈನಲ್ ತಲುಪಿವೆ. ಮಹಿಳಾ ತಂಡವು ೧೦೦-೧೬ ಅಂಕಗಳ ಅಂತರದಿಂದ ಇರಾನ್ ಎದುರು ಸುಲಭ ಗೆಲುವು ದಾಖಲಿಸಿದರೆ, ಪುರುಷರ ತಂಡ ೭೦-೩೮ರ ಅಂತರದಿಂದ ಪೆರು ಎದರು ಹ್ಯಾಟ್ರಿಕ್ ಜಯ ಸಾಧಿಸಿದೆ. ಇದರೊಂದಿಗೆ ಎರಡೂ ತಂಡಗಳು ಗುಂಪಿನ ಅಗ್ರಸ್ಥಾನ ಭದ್ರಪಡಿಸಿಕೊಂಡಿವೆ.

<><><>

ರೂರ್ಕೆಲಾದ ಬಿರ್ಸಾಮುಂಡಾ ಕ್ರೀಡಾಂಗಣದಲ್ಲಿ ಇಂದು ರಾತ್ರಿ ನಡೆಯಲಿರುವ ಪಂದ್ಯದಲ್ಲಿ ಎಸ್‌ಜಿ ಪೈಪರ್ಸ್, ವೇದಾಂತ ಕಳಿಂಗ ಲ್ಯಾನ್ಸ್‌ರ್ಸ್ ತಂಡವನ್ನು ಎದುರಿಸಲಿದೆ. ಪಂದ್ಯ ರಾತ್ರಿ ೮-೧೫ಕ್ಕೆ ಆರಂಭವಾಗಲಿದೆ. ಮಹಿಳಾ ಹಾಕಿ ಇಂಡಿಯಾ ಲೀಗ್‌ನಲ್ಲಿ ಶ್ರಾಚಿ ರಾರ್ಹ್ ಬೆಂಗಾಲ್ ಟೈಗರ್ಸ್, ಒಡಿಶಾ ವಾರಿಯಾರ್ ತಂಡವನ್ನು ಎದುರಿಸಲಿದೆ. ಪಂದ್ಯ ಸಂಜೆ ೬ ಗಂಟೆಗೆ ಪ್ರಾರಂಭವಾಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>